**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಂ.ಎಫ್. ಸಿ, ಕನಕಪುರ**
**C.C. 917/2020**

**CW4 PW4**

| | | |
|---|---|---|
| ಹೆಸರು | : | ಜ್ಯೋತಿ |
| ಗಂಡನ ಹೆಸರು | : | ಕೃಷ್ಣಪ್ಪ |
| ವಯಸ್ಸು | : | **46** |
| ಉದ್ಯೋಗ | : | ವ್ಯವಸಾಯ |
| ವಾಸ | : | ನಾರಾಯಣಪುರ |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 27.06.2026.**

ನ್ಯಾಯಾಲಯ ಮುಂದಿರುವ ಆರೋಪಿತರು ಗೊತ್ತು. ಚಾಸಾ-2 ನನ್ನ ಗಂಡ , ಚಾಸಾ-1 ನನ್ನ ಮಗ , ಚಾಸಾ- 3, 5 ಮತ್ತು 6 ಗೊತ್ತು .

ಸುಮಾರು 5-6 ವರ್ಷಗಳ ಹಿಂದೆ ಚಾಸಾ-2 ರವರಿಗೆ ಆರೋಪಿ1 ರವರು ಹಣ ಕೊಡಬೇಕಾಗಿತ್ತು. ಅದನ್ನು ಕೇಳಲು ಹೋದಾಗ ಆರೋಪಿತರು ಬಂದು ಗಲಾಟೆ ಮಾಡಿರುತ್ತಾರೆ. ಚಾಸಾ-1 ರವರಿಗೆ 1 ನೇ ಆರೋಪಿಯು ದೊಣ್ಣೆಯಿಂದ ಬಲಗೈ ಗೆ ಹೊಡೆದಿರುತ್ತಾರೆ. ಆರೋಪಿ 4 ರವರು ಚಾಸಾ-3 ರವರಿಗೆ ದೊಣ್ಣೆಯಿಂದ ಎಡಗೈಗೆ ಹೊಡೆದಿರುತ್ತಾರೆ. ಗಲಾಟೆ ಬಿಡಿಸಲು ಹೋದ ನನಗೆ ಜೀವ ಬೆದರಿಕೆ ಹಾಕಿರುತ್ತಾರೆ.

ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಮಮು ಮಾಲುಗಳನ್ನು ನೋಡಿ ಗುರುತಿಸುತ್ತಾರೆ. ಘಟನೆಯ ಸಂಬಂಧ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

**<u>ಪಾಟೀ ಸವಾಲು : ಎ ಪಿ ಪಿ ಯವರಿಂದಃ</u>**

ದಿನಾಂಕಃ 20.01.2020 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಗಲಾಟೆ ಆಗಿರುತ್ತದೆ ಎಂದರೆ ಸರಿ . ಆರೋಪಿಗಳು ನಿಮಗೆ , ಚಾಸಾ-1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ . ಗಾಯಗೊಂಡ ಚಾಸಾ-1 ಮತ್ತು 3 ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು: ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ